# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

**ಕರಾವಿಪ ಸಂಸ್ಥೆಯ ನಿಯಮ ಹಾಗೂ ನಿಬಂಧನೆಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಲು ದಿನಾಂಕ 8.5.2016 ರಂದು ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಜರುಗಿದ ವಿಶೇಷ ಮಹಾಸಭೆಯ ನಡವಳಿಗಳು.**

| ಕ್ರಮಾಂಕ | ನಿಯಮ ಸಂಖ್ಯೆ | ಸಂಸ್ಥೆಯ ದಾಖಲೆ ಪತ್ರದಲ್ಲಿರುವಂತೆ | ಕಾರ್ಯಕಾರಿ ಸಮಿತಿಯ ತಿದ್ದುಪಡಿ ಶಿಫಾರಸ್ಸುಗಳು. | ವಿಶೇಷ ಮಹಾಸಭೆಯ ತಿದ್ದುಪಡಿ ನಿರ್ಣಯಗಳು (08.05.2016) |
|---|---|---|---|---|
| 1 | 2.2 | ಎರಡನೇ ಪ್ಯಾರಾದಲ್ಲಿ ನೂತನ ಸೇರ್ಪಡೆ | ಕರಾವಿಪ ಸದಸ್ಯತ್ವ ಹೊಂದಲು ವಾಸಸ್ಥಾನದ ಬಗ್ಗೆ ಯಾವುದಾದರೊಂದು ಪುರಾವೆ ಇರತಕ್ಕದ್ದು. ಉದಾ: ವೋಟರ್ಸ್ ಐಡಿ ಕಾರ್ಡ ಆಧಾರ ಕಾರ್ಡ / ಪಡಿತರ ಚೀಟಿ / ಡ್ರೈವಿಂಗ ಲೈಸೆನ್ಸ / ವಾಸ ಸ್ಥಳದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ, ಇತ್ಯಾದಿ. | ಸಭೆಯು ಉದ್ದೇಶಿತ ತಿದ್ದುಪಡಿಗೆ ಸರ್ವಾನುಮತದಿಂದ ಅನುಮೋದನೆ ಸೂಚಿಸಿತು. ಇದರ ಜೊತೆಗೆ ಈ ಕೆಳಗಿನ ಅಂಶಗಳನ್ನು ಸಹ ತಿದ್ದುಪಡಿಗೆ ಸೇರ್ಪಡೆಮಾಡಲು ಸರ್ವಾನುಮತದಿಂದ ಸೂಚಿಸಿತು.<br>ಸಾಂಸ್ಥಿಕ ಸದಸ್ಯತ್ವ ಬಯಸುವ ಖಾಸಗಿ ಸಂಸ್ಥೆಗಳು ಮೂಲ ನೋಂದಣಿ ಹಾಗೂ ಪ್ರಸ್ತುತ ವರ್ಷದ ನವೀಕರಣ ಪತ್ರಗಳ ದೃಢೀಕೃತ ಜೆರಾಕ್ಸ್ ಪ್ರತಿ ಸಲ್ಲಿಸುವುದು. (ಸರ್ಕಾರಿ ಶಾಲಾ ಕಾಲೇಜುಗಳಿಗೆ ಇದು ಅನ್ವಯಿಸುವುದಿಲ್ಲ).<br>ವರ್ಗಾವಣೆಗೆ ಒಳಪಟ್ಟ ನೌಕರರು ವರ್ಗಾವಣಾ ಆದೇಶದ ಪ್ರತಿ ಸಲ್ಲಿಸುವುದು. |
| 2 | 6.2 (i) | ಎರಡನೇ ಪ್ಯಾರಾದಲ್ಲಿ ನೂತನ ಸೇರ್ಪಡೆ | ಕಾರ್ಯಕಾರಿ ಸಮಿತಿ ಚುನಾವಣೆಯ ನಂತರ ಎರಡು ತಿಂಗಳೊಳಗಾಗಿ ಎಲ್ಲಾ ಜಿಲ್ಲಾ ಸಮಿತಿಗಳು ಪುನಃ ರಚನೆಯಾಗಬೇಕು ಜಿಲ್ಲಾ ಸಮಿತಿಯ ಅವಧಿಯು ಕಾರ್ಯಕಾರಿ ಸಮಿತಿ ಅವಧಿಯೊಂದಿಗೆ ಮುಕ್ತಾಯವಾಗುತ್ತದೆ. | ಈ ತಿದ್ದುಪಡಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡುತ್ತಾ ತಿದ್ದುಪಡಿಯಲ್ಲಿ ಈ ಮುಂದಿನ ಅಂಶಗಳನ್ನು ಹೆಚ್ಚುವರಿಯಾಗಿ ಅಳವಡಿಸುವಂತೆ ಸೂಚಿಸಿತು.<br>ಪ್ರಸ್ತುತ ಚಾಲನೆಯಲ್ಲಿರುವ ಜಿಲ್ಲಾ ಸಮಿತಿಗಳು ನಂತರದಲ್ಲಿ ರಚಿತವಾದ ಜಿಲ್ಲಾ ಸಮಿತಿಗಳಿಗೆ ಆಡಳಿತದ ಹಾಗೂ ಲೆಕ್ಕ ಪತ್ರ ವ್ಯವಹಾರಗಳಿಗೆ ಸಂಬಂದಿಸಿದ ಎಲ್ಲ ದಾಖಲೆಗಳನ್ನು ಅಧಿಕೃತವಾಗಿ ವರ್ಗಾಯಿಸುವುದು.<br>ರಾಜ್ಯ ಕಾರ್ಯಕಾರಿ ಸಮಿತಿಯ ಪೂರ್ವಾನುಮತಿಯಿಲ್ಲದೆ ಜಿಲ್ಲಾ ಸಮಿತಿಯು ಯಾವುದೇ ರೀತಿಯ ಸಾಲ ಮಾಡುವಂತಿಲ್ಲ. |

| | | | | |
|---|---|---|---|---|
| 3 | 6.2 (i) | ಮೂರನೇ ಪ್ಯಾರಾದಲ್ಲಿ ನೂತನ ಸೇರ್ಪಡೆ | ರಾಜ್ಯದ ಯಾವುದೇ ತಾಲೂಕಿನಲ್ಲಿ 10 ಕ್ಕೂ ಹೆಚ್ಚು ಕರಾವಿಪ ಸದಸ್ಯರಿದ್ದರೆ ಅಂತಹ ತಾಲೂಕುಗಳಲ್ಲಿ ಪರಿಷತ್ತಿನ ತಾಲೂಕು ಸಮಿತಿ ರಚಿಸುವುದು. | ತಾಲೂಕು ಸಮಿತಿಯ ರಚನೆಗೆ ಸದಸ್ಯತ್ವ ಸಂಖ್ಯೆಯನ್ನು ಉದ್ದೇಶಿತ 10ರ ಬದಲಿಗೆ ಕನಿಷ್ಠ **25ಕ್ಕೆ** ಏರಿಸಲು ಸಭೆಯು ಶಿಫಾರಸ್ಸು ಮಾಡುತ್ತಾ ಈ ತಿದ್ದುಪಡಿಗೆ ಅನುಮೋದನೆ ನೀಡಿತು. |
| 4 | 6.4.1 (vi) ಅನುಬಂಧ–1ಕ್ಕೆ ತಿದ್ದುಪಡಿ 2 (6) ಅ. | ಎರಡನೇ ಪ್ಯಾರಾದಲ್ಲಿ ತಿದ್ದುಪಡಿ | ಸದಸ್ಯತ್ವ ಹೊಂದಿದ ಕನಿಷ್ಟ 3 ವರ್ಷಗಳ ನಂತರ ಮತದಾನದ ಹಕ್ಕಿಗೆ ಒಳಪಡುವುದು. | ಮತದಾನದ ಹಕ್ಕನ್ನು ಪಡೆಯಲು ಚುನಾವಣಾ ಅಧಿಸೂಚನೆ ದಿನಾಂಕದಂದಿಗೆ ಕನಿಷ್ಠ ಒಂದು ವರ್ಷದ ಸದಸ್ಯತ್ವ ಅವಧಿಯನ್ನು ಪೂರ್ಣಗೊಳಿಸಿರಬೇಕು. 2016ರ ಚುನಾವಣೆಗೆ ಸಂಬಂಧಿಸಿದಂತೆ ಸಂಘ ಸಂಸ್ಥೆಗಳ ನೋಂದಣಿ ಕಛೇರಿಯಲ್ಲಿ ಈ ತಿದ್ದುಪಡಿ ನೋಂದಣಿಯಾಗುವ ದಿನಾಂಕದವರೆಗೂ ಸದಸ್ಯತ್ವ ಪಡೆದವರಿಗೆ ಮತದಾನದ ಹಕ್ಕು ನೀಡಲು ಸಭೆಯು ಸೂಚಿಸಿತು. |
| 5 | 6.4.1 (i) | ಎರಡನೇ ಪ್ಯಾರಾದಲ್ಲಿ ನೂತನ ಸೇರ್ಪಡೆ | ಮಹಿಳೆ ಹಾಗೂ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಪ್ರಾತಿನಿಧ್ಯ : ಕಾರ್ಯಕಾರಿ ಸಮಿತಿ ಸದಸ್ಯರ 24 ಸ್ಥಾನಗಳಲ್ಲಿ ವಿಭಾಗವಾರು ಸರದಿ ಆಧಾರ ತಲಾ ಒಂದು ಸ್ಥಾನವನ್ನು ಮಹಿಳೆಯರಿಗೆ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸುವುದು. ಪ್ರಾರಂಭದ ಹಂತದಲ್ಲಿ ಮೈಸೂರು ವಿಭಾಗಕ್ಕೆ (ಮಹಿಳೆ) ಮತ್ತು ಬೆಂಗಳೂರು ವಿಭಾಗಕ್ಕೆ (ಪ.ಜಾ/ಪ.ಪಂ) ಮೀಸಲಾತಿ ನೀಡುವುದು. ಹಾಗೂ ಮುಂದಿನ ಚುಣಾವಣೆಗಳಲ್ಲಿ ಕಲಬುರ್ಗಿ ವಿಭಾಗಕ್ಕೆ (ಮಹಿಳೆ) ಮತ್ತು ಬೆಳಗಾವಿ ವಿಭಾಗಕ್ಕೆ (ಪ.ಜಾ/ಪ.ಪಂ) ಮೀಸಲಾತಿ ನೀಡುವುದು. | ತಿದ್ದುಪಡಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಪ.ಜಾ ಅಥವಾ ಪ.ಪಂಗಡದ ಮೀಸಲಾತಿ ಒಂದು (1) ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಯಾರು (ಪ.ಜಾ ಅಥವಾ ಪ.ಪಂ) ಹೆಚ್ಚು ಮತಗಳನ್ನು ಗಳಿಸುತ್ತಾರೋ, ಆ ವರ್ಗದ ವ್ಯಕ್ತಿಯನ್ನು ವಿಜೇತನೆಂದು ಘೋಷಿಸುವುದು.<br><br>ಮಹಿಳೆ ಹಾಗೂ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಮೀಸಲಾತಿ 'ರೋಸ್ಟರ್' ನಿಗದಿಪಡಿಸುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಗೆ ನೀಡುವಂತೆ ಸಭೆಯು ಸೂಚಿಸಿತು. |

ಡಾ॥ ವಸುಂಧರಾ ಭೂಪತಿ
ಗೌರವ ಕಾರ್ಯದರ್ಶಿ

ಶ್ರೀ ಎಸ್. ವ್ಹಿ. ಸಂಕನೂರ
ಮಾನ್ಯ ಅಧ್ಯಕ್ಷರು.